**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 3/2010**

**ದೋ.ಸಾ. :116 ಪ್ರಾ.ಸಾ. : 55**

| | |
|---|---|
| ಸಾಕ್ಷಿಯ ಹೆಸರು | : ಗಣಪತಿ ಮೈಲಾ ನಾಯಕ್ |
| ತಂದೆಯ ಹೆಸರು | : ಮೈಲಾ ನಾಯಕ್ |
| ವಯಸ್ಸು | : 56 ವರ್ಷ |
| ಉದ್ಯೋಗ | : ರೈತಾಪಿ. |
| ವಾಸ | : ತೋರಣಕೊಪ್ಪ, ಸೊರಬಾ. |

**ದಿನಾಂಕಃ 06-12-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು ಕಾನಗೋಡು ಗ್ರಾಮದಲ್ಲಿ ಹುಟ್ಟಿದಾಗಿನಿಂದ ವಾಸ ಇದ್ದೆ, 2018 ರಲ್ಲಿ ನಾನು ಬೇರೆ ಕಡೆಗೆ ಬಂದು ವಾಸ್ತವ್ಯ ಇದ್ದೇನೆ. ಕಾನಗೋಡದಲ್ಲಿ ನನ್ನ ಸ್ವಂತ ಮನೆ ಇದೆ ಅಲ್ಲಿ ಈಗ ನನ್ನ ತಂದೆ ಮತ್ತು ಸಹೋದರರು ವಾಸ ಇದ್ದಾರೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯ ಪರಿಚಯ ನನಗೆ ಇದ್ದಾನೆ. ಆರೋಪಿ ಕಾನಗೋಡು ಗ್ರಾಮ ಪಂಚಾಯತಿಯ ಅಧ್ಯಕ್ಷ ಆಗಿದ್ದ. 2001-02 ರಲ್ಲಿ ಸರ್ಕಾರ ಸ್ವಚ್ಛ ಗ್ರಾಮ ಯೋಜನೆ ಅಡಿಯಲ್ಲಿ ನಮ್ಮ ಗ್ರಾಮಕ್ಕೆ ಶೌಚಾಲಯ ನಿರ್ಮಿಸಿಕೊಳ್ಳಲು ರೂ.20 ಲಕ್ಷ ಅನುದಾನ ನೀಡಿದ್ದರು. ಅದರಲ್ಲಿ 210 ಫಲಾನುಭವಿಗಳು ಆಯ್ಕೆ ಆಗಿದ್ದರು ಎನ್ನುವುದು ಗೊತ್ತಿಲ್ಲ. ಅದರಲ್ಲಿ ನನ್ನ ಹೆಸರು ಇತ್ತು ನನಗೆ ಶೌಚಾಲಯ ನಿರ್ಮಾಣ ಮಾಡಿಕೊಳ್ಳಲು ಹಣ ಕೊಟ್ಟಿದ್ದರು ಯಾವ ಸಾಲಿನಲ್ಲಿ ಎಂದು ನೆನಪಿಲ್ಲ, ಎಷ್ಟು ಹಣ ಕೊಟ್ಟಿದ್ದರು ಎಂದು ನೆನಪಿಲ್ಲ. ನನಗೆ ಸಹಾಯಧನ ನೀಡಿದಾಗ ಆರೋಪಿ ಗ್ರಾಮ ಪಂಚಾಯತಿ ಅಧ್ಯಕ್ಷ ಆಗಿದ್ದನೋ ಇಲ್ಲವೋ ಎಂದು ಗೊತ್ತಿಲ್ಲ. ಪೊಲೀಸನವರು ನನ್ನನ್ನು ಈ ಪ್ರಕರಣದಲ್ಲಿ ವಿಚಾರಣೆ ಮಾಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ವಿಶೇಷ ಸರಕಾರಿ ಅಭಿಯೋಜಕರಿಂದಃ–**

2. ದಿನಾಂಕಃ 14.09.2005 ರಂದು ಕಾರವಾರದ ಲೋಕಾಯುಕ್ತ ಆರಕ್ಷಕ ನಿರೀಕ್ಷಕರ ಮುಂದೆ ನಾನು 2001–02 ನೇ ಸಾಲಿನಲ್ಲಿ ಕಾನಗೋಡ ಗ್ರಾಮದಲ್ಲಿ ಸ್ವಚ್ಛ ಗ್ರಾಮ ಯೋಜನೆ ಅಡಿಯಲ್ಲಿ ಸರ್ಕಾರದಿಂದರೂ.20 ಲಕ್ಷ ಮಂಜೂರು ಆಗಿತ್ತು ಮತ್ತು 210 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿತ್ತು ಮತ್ತು ನನ್ನ ಹೆಸರು ಆಯ್ಕೆ ಮಾಡಿದ್ದರು, ಆದರೆ ತನಗೆ ರೂ.3000/– ಸಹಾಯಧನವನ್ನು ಕೊಟ್ಟಿಲ್ಲ ಎಂದು ಮತ್ತು ಶೌಚಾಲಯನ್ನು ಸಹ ಕಟ್ಟಿಸಿಕೊಟ್ಟಿಲ್ಲ ಎಂದು ಹೇಳಿಕೆ ಕೊಟ್ಟಿಲ್ಲ. ಸದರಿ ಹೇಳಿಕೆಯನ್ನು ನಿಪಿ–85 ಎಂದು ಗುರುತಿಸಲಾಯಿತು. ನನಗೆ ಆ ಎಲ್ಲಾ ವಿಚಾರ ಗೊತ್ತಿದ್ದರೂ ಮತ್ತು ಆ ರೀತಿ ಹೇಳಿಕೆ ಕೊಟ್ಟಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ವಕೀಲರಾದ ಶ್ರೀ ಜಿ ಟಿ ಎನ್ ರವರಿಂದಃ–**

ಏನೂ ಇಲ್ಲ ಎಂದು ಹೇಳಿದ್ದಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ